ಕರ್ನಾಟಕ ಗೃಹ ನಿರ್ಮಾಣ ಮಂಡಲಿಯು ಮನೆ ಖರೀದಿಸಲು ಸರ್ಕಾರಿ ನೌಕರರಿಗೆ ''ಗೃಹ ಖರೀದಿ ಮುಂಗಡ ಹಣ'' ವನ್ನು ಕೂಡಲೇ ಮಂಜೂರು ಮಾಡುವುದು

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಜೂರಾದ ಕರ್ನಾಟಕ ಗೃಹ ನಿರ್ಮಾಣ ಮಂಡಲಿಯು ಮನೆಗಳನ್ನು ಸರ್ಕಾರಿ ನೌಕರರಿಗೆ ಅವರವರ ಕಛೇರಿಗಳಿಂದ ಮನೆ ಖರೀದಿ ಮುಂಗಡ ಹಣವನ್ನು ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆಯೇ ?

ಆ) ಹಾಗಿದ್ದಲ್ಲಿ, ಮಂಜೂರಾದ ಗೃಹದ ಮೌಲ್ಯಕ್ಕಿಂತ ಕಡಿಮೆ ''ಮನೆ ಖರೀದಿ ಮುಂಗಡ ಹಣ'' ಪಡೆಯುವಂತಹ ಪ್ರಕರಣಗಳಲ್ಲಿ ನೌಕರರಿಗೆ ಕೂಡಲೇ ಗೃಹ ಮೌಲ್ಯದ ಹಣವನ್ನು ಮಂಜೂರು ಮಾಡಲಾಗುತ್ತಿದೆಯೇ ?

ಇ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಈ) ಸರ್ಕಾರಿ ನೌಕರರ ತೊಂದರೆಯನ್ನು ತಪ್ಪಿಸಲು ಕರ್ನಾಟಕ ಗೃಹ ನಿರ್ಮಾಣ ಮಂಡಲಿಯವರು ಮಂಜೂರು ಮಾಡುವ ಆದೇಶದ ಪತ್ರದ ಮೇರೆಗೆ ನೌಕರರಿಗೆ ಗೃಹದ ಮೌಲ್ಯದ ಪೂರ್ಣ ಹಣವನ್ನು ಕೂಡಲೇ ಮಂಜೂರು ಮಾಡಲು ಕ್ರಮವನ್ನು ಸರ್ಕಾರದವರು ತಕ್ಷಣ ಕೈಗೊಳ್ಳುವರೇ ?

ಶ್ರೀ ರಾಮಕೃಷ್ಣ ಹೆಗ್ಗಡೆ (ಮುಖ್ಯ ಮಂತ್ರಿಯವರು).—

ಅ) ನಿಯಮಗಳನುಸಾರವಾಗಿ ಮನೆ ಕಟ್ಟುವ ಅಥವಾ ಮನೆ ಕೊಳ್ಳುವ ಸಲುವಾಗಿ ಮಂಜೂರು ಮಾಡಲಾಗುವ ಮುಂಗಡ ಹಣದಿಂದ ಸರ್ಕಾರಿ ನೌಕರರಿಗೆ ಕರ್ನಾಟಕ ಗೃಹ ನಿರ್ಮಾಣ ಮಂಡಲಿಯು ಮನೆಗಳನ್ನು ಕೊಳ್ಳಲು ಮುಂಗಡ ಹಣವನ್ನು ಆಧ್ಯತೆಯ ಮೇಲೆ ಮಂಜೂರು ಮಾಡಲು ಅವಕಾಶ ಉಂಟು.

ಆ) ಇಲ್ಲ.

ಇ) ಸರ್ಕಾರಿ ನೌಕರರಿಗೆ ಮನೆ ಖರೀದಿ ಅಥವಾ ಮನೆ ಕಟ್ಟಲು ಅವರ ಆರು ತಿಂಗಳ ಮೂಲ ವೇತನದಷ್ಟು (ಒಂದು ಲಕ್ಷ ರೂಪಾಯಿಗೆ ವಿಸ್ತಾರದಂತೆ) ಮುಂಗಡ ಹಣವನ್ನು ನಿಯಮಗಳ ಪ್ರಕಾರ ಮಂಜೂರು ಮಾಡಲು ಅವಕಾಶವುಂಟು. ಇದಕ್ಕಿಂತ ಹೆಚ್ಚು ಹಣವನ್ನು ಸರ್ಕಾರ ಮಂಜೂರು ಮಾಡಲು ನಿಯಮದಲ್ಲಿ ಅವಕಾಶವಿಲ್ಲ.

ಈ) ನಿಯಮಗಳ ಪ್ರಕಾರ ನೌಕರರಿಗೆ ಆರು ತಿಂಗಳ ಮೂಲ ವೇತನದಷ್ಟು (ಒಂದು ಲಕ್ಷ ರೂಪಾಯಿಗೆ ವಿಸ್ತಾರದಂತೆ) ಮುಂಗಡ ಹಣವನ್ನು ಮಂಜೂರು ಮಾಡಲಾಗುತ್ತಿದೆ. ಕರ್ನಾಟಕ ಗೃಹ ನಿರ್ಮಾಣ ಮಂಡಲಿಯಿಂದ ಕೊಳ್ಳಬಹುದಾದ ಮನೆಗಳ ಮೌಲ್ಯದ ಮೊತ್ತವು ನಿಯಮದ ಪ್ರಕಾರ ಮಂಜೂರು ಮಾಡಲಾಗುವ ಮುಂಗಡ ಹಣಕ್ಕಿಂತ ಹೆಚ್ಚಾಗಿದ್ದಲ್ಲಿ, ಆ ಹೆಚ್ಚಿನ ಮೊತ್ತವನ್ನು ಸರ್ಕಾರವು ಮಂಜೂರು ಮಾಡಲು ನಿಯಮದಲ್ಲಿ ಅವಕಾಶವಿಲ್ಲ.

ಧಾರವಾಡ ಜಿಲ್ಲಾ ಸರಕಾರಿ ಆಸ್ಪತ್ರೆಯ ಬಗ್ಗೆ

ಶ್ರೀ ಚಂದ್ರಕಾಂತ ಬೆಲ್ಲದ(ಧಾರವಾಡ).— ಮಾನ್ಯ ಆರೋಗ್ಯ ಮತ್ತು ಅಟ್ಟಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡದ ಜಿಲ್ಲಾ ಸರ್ಕಾರಿ ಸಾರ್ವಜನಿಕ ದವಾಖಾನೆ ಒಂದುನೂರು ಸಾಲ್ಕು ವರ್ಷ ಕಳೆದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಅದರ ಶತಮಾನೋತ್ಸವದ ಆಚರಣೆ ಮಾಡುವ ಯೋಜನೆ ಯಾವ ಹಂತದಲ್ಲಿ ಇದೆ ?